# ಹುಬ್ಬಳ್ಳಿ ಚೆಲುವೆ ಈಗ ವಿಶ್ವಸುಂದರಿ!



**ಹುಬ್ಬಳ್ಳಿಯ ಶ್ರುತಿ ಹೆಗಡೆ ಅಮೆರಿಕದಲ್ಲಿ ನಡೆದ 2024ರ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ವಿಜಯಿಯಾಗಿ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ. ಇದಕ್ಕೂ ಮೊದಲು 2018ರಲ್ಲಿ ಮಿಸ್ ಕರ್ನಾಟಕ ರನ್ನರ್ ಅಪ್, ಮಿಸ್ ಸೌತ್ ಇಂಡಿಯಾ ವಿಜೇತಳಾಗಿದ್ದರು. 2023ರಲ್ಲಿ ಮಿಸ್ ಏಷ್ಯಾ ಇಂಟರ್ ನ್ಯಾಷನಲ್ ಇಂಡಿಯಾ ಪ್ರಶಸ್ತಿ ಗೆದ್ದಿದ್ದ ಈಕೆ ಸುಂದರಿಯರ ಸಾಲಿಗೆ ಅಧಿಕೃತವಾಗಿ ಸೇರಿದಂತಾಗಿದೆ.**

**■ ಲತಾ ಹೆಗಡೆ**

ಕಳೆದ ಜೂನ್ ತಿಂಗಳಲ್ಲಿ ಅಮೆರಿಕದಲ್ಲಿ ನಡೆದ ವಿಶ್ವ ಸುಂದರಿ ಸ್ಪರ್ಧೆ. ಹುಬ್ಬಳ್ಳಿಯ ಯುವ ವೈದ್ಯೆ ಡಾ. ಶ್ರುತಿ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಗೆದ್ದು ಬೀಗಿದ ಅವಿಸ್ಮರಣೀಯ ಕ್ಷಣಕ್ಕೆ ಇಡೀ ಜಗತ್ತೇ ಸಾಕ್ಷಿಯಾಗಿತ್ತು. ಸ್ಫುಟವಾದ ಕನ್ನಡದಲ್ಲಿ ಅನುಭವದ ಮಾತುಗಳನ್ನಾಡಿದ ಈಕೆ, ಸುಶ್ರಾವ್ಯವಾಗಿ ಹಾಡಿದ 'ಯಾವ ಮೋಹನ ಮುರಳಿ ಕರೆಯಿತು' ಸ್ವರ ಮಾಧುರ್ಯಕ್ಕೆ ಕೇಳುಗರು ತಲೆದೂಗಿದ್ದು ವಿಶೇಷ.

ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗಂತೂ ಎರಡು ದೋಣಿಯಲ್ಲಿ ಕಾಲಿಡದೆ ಶಿಕ್ಷಣವನ್ನಷ್ಟೇ ಆಯ್ದುಕೊಂಡು ಗುರಿ ತಲುಪುವಂತೆ ಸಲಹೆ, ಉಪದೇಶಗಳು ಧಾರಾಳವಾಗಿ, ಅದಕ್ಕೆ ಬದ್ಧರಾಗಿ ಮುನ್ನಡೆಯಲೇಬೇಕಾದ ಅನಿವಾರ್ಯತೆ. ಎಂತಲೇ ಒಂಬತ್ತನೇ ತರಗತಿಗೆ ಕಾಲಿಡುತ್ತಲೇ ನೃತ್ಯ, ಸಂಗೀತ ಮುಂತಾದ ಹವ್ಯಾಸ, ಕಲಿಕೆಗಳಿಗೆ ಪೂರ್ಣವಿರಾಮ ಮತ್ತು ಓದಿನೆಡೆಗೆ ಸಂಪೂರ್ಣ ಗಮನ! ಈ ವ್ಯವಸ್ಥೆಯಲ್ಲಿ ಸ್ಟೆತಾಸ್ಕೋಪ್ ಹಿಡಿದೂ ಅಂತರರಾಷ್ಟ್ರೀಯ ಬ್ಯೂಟಿ ಪೇಜೆಂಟಿನಲ್ಲಿ ಸ್ಪರ್ಧಿಸಿ 'ಮಿಸ್ ಯೂನಿವರ್ಸಲ್ ಪೆಟೀಟ್ 2024' ಟಿಯಾರಾವನ್ನು ಮುಡಿಗೇರಿಸಿಕೊಂಡ ಮೊದಲ ಕನ್ನಡತಿಯಷ್ಟೇ ಅಲ್ಲದೆ ಮೊದಲ ಭಾರತೀಯಳೆಂಬ ಹೆಗ್ಗಳಿಕೆ ಉತ್ತರ ಕರ್ನಾಟಕದ ಡಾ. ಶ್ರುತಿ ಹೆಗಡೆಯವರಿಗೆ ಸಲ್ಲುತ್ತದೆ. 40 ದೇಶದ ಸ್ಪರ್ಧಾರ್ಥಿಗಳನ್ನು ಹಿಂದಿಕ್ಕಿ ಕಿರೀಟವನ್ನು ತಮ್ಮದಾಗಿಸಿಕೊಂಡ ಇವರು ಬಹುಮುಖ ಪ್ರತಿಭೆಯೇ ಸೈ! ಸಿಂಪಲ್ ಆಗಿ ಶ್ರುತಿ ಅವರನ್ನು 'ಬ್ಯೂಟಿ ವಿತ್ ಬ್ರೇನ್' ಎನ್ನಬಹುದು.

ಶ್ರುತಿ ಉತ್ತರ ಕನ್ನಡ ಜಿಲ್ಲೆ ಶಿರಸಿಯ ಮುಂಡಿಗೇಸರದ ಮೂಲದವರು. ಸಂಪ್ರದಾಯದ ಚೌಕಟ್ಟನ್ನು ದಾಟಿ ಸೌಂದರ್ಯ ಸ್ಪರ್ಧೆಯೆಡೆ ಗಮನವಿತ್ತು ಪಾಲ್ಗೊಳ್ಳುವುದು ಡಾ. ಶ್ರುತಿಗೆ ಸುಲಭದ ಮಾತಾಗಿರಲಿಲ್ಲ. ತಂದೆ ಡಾ. ಕೃಷ್ಣ ಹೆಗಡೆ ಮತ್ತು ಅಣ್ಣ ಡಾ. ಸತೀಶ್ ಅವರಂತೆಯೇ ಸೇವೆಯನ್ನೇ ಗುರಿಯಾಗಿಸಿ ವೈದ್ಯವೃತ್ತಿಯನ್ನು ಆಯ್ದುಕೊಂಡೂ ಕಾಡುತ್ತಿದ್ದ ಕನಸಿನ ಬೆನ್ನೇರಿ ಛಲದಿಂದ ಸಾಧಿಸಿ ಮನಸ್ಸಿದ್ದಲ್ಲಿ ಮಾರ್ಗವುಂಟು ಎಂಬುದಕ್ಕೆ ಜ್ವಲಂತ ಉದಾಹರಣೆಯಾಗಿದ್ದಾರೆ. ತಾಯಿ ಕಮಲಾ ಹೆಗಡೆಯವರು ಮಗಳ ಕನಸುಗಳಿಗೆ ಬೆನ್ನೆಲುಬಾಗಿ ಬೆಂಬಲವಿತ್ತು ಪ್ರೋತ್ಸಾಹಿಸಿದ್ದರು.

'ಎಲ್ಲರಂತೆಯೇ ನನ್ನಲ್ಲೂ ಕನಸಿತ್ತು, ಋಣಾತ್ಮಕ ಮಾತುಗಳಿಂದ ವಿಚಲಿತಳಾಗದೇ ಕನಸನ್ನು ನನಸಾಗಿಸಲು ಛಲದಿಂದ ಮುನ್ನುಗ್ಗಿದ್ದರ ಫಲಶ್ರುತಿಯೇ ಇದಾಗಿದೆ. ಕನಸುಗಳೇನೇ ಇದ್ದರೂ ಅದರೆಡೆ ಲಕ್ಷ್ಯವಿಟ್ಟು ದೃಢತೆಯಿಂದ ಸಾಗಿದರೆ ಯಶ ಶತಃಸಿದ್ಧ' ಎಂಬುದು ಡಾ. ಶ್ರುತಿ ಅವರ ಮನದಾಳದ ಮಾತು. ಧಾರವಾಡದ ಎಸ್‌ಡಿಎಂ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ವ್ಯಾಸಂಗದ ನಂತರ ಪ್ರಸ್ತುತ ತುಮಕೂರಿನ ಮೆಡಿಕಲ್ ಕಾಲೇಜಿನಲ್ಲಿ ಚರ್ಮರೋಗ ವಿಷಯದಲ್ಲಿ ಎಂಡಿ ಅಧ್ಯಯನ ಮಾಡುತ್ತಿದ್ದಾರೆ. 2019ರಲ್ಲಿ ಹೊಟ್ಟೆಯ ಟ್ಯೂಮರಿನ ಕಾರಣ ತೆರೆದ ಶಸ್ತ್ರಚಿಕಿತ್ಸೆಗೆ ಒಳಪಟ್ಟಾಗ ಚೇತರಿಕೆಯ ಜೊತೆಗೆ ಇಂಟರ್ನ್‌ಶಿಪ್, ನೀಟ್‌ಪರೀಕ್ಷೆಗೂ ಸಿದ್ಧತೆ ನಡೆಸುವ ನಿಟ್ಟಿನಲ್ಲಿ ಜೀವನದ ಎರಡು ಅಮೂಲ್ಯ ವರ್ಷಗಳುರುಳಿ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಭಾಗವಹಿಸಲಾಗದಿದ್ದರೂ ಭರವಸೆ ಕಳೆದುಕೊಳ್ಳದವರು ಶ್ರುತಿ.

## ನೃತ್ಯ ಕಲಾವಿದೆ

ಶ್ರುತಿ ನುರಿತ ಭರತನಾಟ್ಯ ಕಲಾವಿದೆಯೂ ಹೌದು. ಕಥಕ್ಕಳಿ, ಕೂಚುಪುಡಿ ನೃತ್ಯ ಪ್ರಕಾರಗಳಲ್ಲೂ ಅಭಿರುಚಿಯಿದ್ದು ದೇಶ ವಿದೇಶಗಳಲ್ಲಿ ಪ್ರದರ್ಶನವನ್ನೂ ನೀಡಿದ್ದಾರೆ. ಚಲನಚಿತ್ರಗಳಾದ 'ಜನುಮದಾತದಲ್ಲಿ ಮುಖ್ಯ ಭೂಮಿಕೆ; 'ಶರಣರ ಶಕ್ತಿಯ ನೃತ್ಯಗಾತಿ ಶರಣರ ಸಂಕವ್ವ; ನಾಗಾಭರಣರ 'ಜೀನಿಯಸ್ ಮುತ್ತ ಹಾಗೂ ಕಿರುತೆರೆಯ ಹಿಟ್ಲರ್ ಕಲ್ಯಾಣ, ಮತ್ತೆ ಮಾಯಾಮೃಗ, ವೆಬ್ ಸೀರೀಸಿನಲ್ಲೂ ನಟನೆಯ ಛಾಪು ಮೂಡಿಸಿದ್ದಾರೆ. ಸ್ಕೆಚ್, ಪೇಂಟಿಂಗ್, ಕ್ಯಾಲಿಗ್ರಫಿ, ಸಂಗೀತ, ಕಥೆ ಕವನಗಳ ರಚನೆ, ಪುಸ್ತಕ ಓದುವುದು, ಸ್ಕೇಟಿಂಗ್, ಚೆಸ್ ಮುಂತಾದವು ಹವ್ಯಾಸಗಳಾಗಿ ಬಹುಮಾನಗಳೂ ಸಂದಿವೆ.

ಹೆತ್ತವರು, ಅಣ್ಣನೊಡಗೂಡಿ 'ಶ್ರಮ' ಹೆಸರಿನ ಎನ್‌ಜಿಒ ನಡೆಸುತ್ತಿದ್ದು ಉಚಿತ ವೈದ್ಯಕೀಯ ಸೇವೆ, ಅಂಗವಿಕಲರಿಗೆ ಧನಸಹಾಯ, ನಿರಾಶ್ರಿತರು, ಬಡವರಿಗೆ ಉಚಿತ ಆಹಾರ ಪೂರೈಸುತ್ತಿದ್ದಾರೆ. ಪ್ರಮುಖವಾಗಿ ಗರ್ಭಕಂಠ ಕ್ಯಾನ್ಸರಿನಂತಹ ಮಾರಕ ರೋಗದ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ದೃಢ ಸಂಕಲ್ಪ, ನಿರಂತರ ಪರಿಶ್ರಮದಿಂದ ಗುರಿಯ ಬೆನ್ನು ಹತ್ತಿ ಯಶಸ್ವಿಯಾದ ಶ್ರುತಿಯವರಿಗೆ 'ಸ್ಕೈ ಈಸ್ ದ ಲಿಮಿಟ್' ಎಂಬುದು ನಿಜಕ್ಕೂ ಅನ್ವರ್ಥ. ■